# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೆಗೌಡ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 949 |
| ಉತ್ತರಿಸಬೇಕಾದ ದಿನಾಂಕ | : | 24.07.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಹಲವು ಗ್ರಾಮ ಮತ್ತು ಪಟ್ಟಣಗಳಲ್ಲಿ ಖಾಲಿ ಇರುವ ಒಟ್ಟು ನಿವೇಶನಗಳೆಷ್ಟು; | ರಾಜ್ಯಾದ್ಯಂತ ನಿವೇಶನ ಹಂಚಿಕೆಗೆ ಮಂಜೂರಾಗಿರುವ ಸರ್ಕಾರಿ/ಖರೀದಿಸಲಾದ ಖಾಸಗಿ ಜಮೀನಿನಲ್ಲಿ ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ 2365.87 ಹಾಗೂ ನಗರ ಪ್ರದೇಶದಲ್ಲಿ 2295.87 ಎಕರೆ ಒಟ್ಟು **4661.74** ಎಕರೆ ಜಮೀನು ಲಭ್ಯವಿದ್ದು, ಪ್ರತಿ ಎಕರೆಗೆ ಗ್ರಾಮೀಣ ಪ್ರದೇಶಗಳಲ್ಲಿ 20 ಹಾಗೂ ನಗರ ಪ್ರದೇಶದಲ್ಲಿ 40 ನಿವೇಶನಗಳಂತೆ ಒಟ್ಟು 139151 ನಿವೇಶನಗಳನ್ನು ಹಂಚಿಕೆ ಮಾಡಬಹುದಾಗಿದೆ. |
| ಆ) | ಹಲವು ಬಡ ಗ್ರಾಮಗಳಲ್ಲಿ ಪ್ರವಾಹ ಅಥವಾ ಮಳೆ ಸಂಬಂಧ ಮನೆ ಬಿದ್ದು ಹೋದ ನಂತರ ಉಳಿಯುವ ಖಾಲಿ ನಿವೇಶನಕ್ಕೆ ಸಂಬಂಧಪಟ್ಟ ಮಾಲೀಕರಿಗೆ ಸರ್ಕಾರದ ಮಟ್ಟದಲ್ಲಿ ಸಿಗುವ ಪರಿಹಾರಗಳೇನು; | ಮಳೆ/ಪ್ರವಾಹದಿಂದ ಸಂಪೂರ್ಣ-ಎ ಹಾಗೂ ಭಾಗಶಃ (ಪುನರ್ ನಿರ್ಮಾಣ)-ಬಿ2 ವರ್ಗದಡಿ ಆಯ್ಕೆಯಾದ ಮನೆಗಳಿಗೆ ಸರ್ಕಾರವು ರೂ.5,00,000/-ಗಳ ಪರಿಹಾರಧನ ನಿಗದಿಪಡಿಸಿದ್ದು, NDRF/SDRF ಮಾರ್ಗಸೂಚಿಯನ್ವಯ ಆರಂಭಿಕ ಹಂತ/ಪ್ರಥಮ ಕಂತಿನ ಪರಿಹಾರಧನ ರೂ.1,20,000/-ಗಳನ್ನು ಜಿಲ್ಲಾಡಳಿತ/ನಿಗಮದಿಂದ ಬಿಡುಗಡೆ ಮಾಡಲಾಗುತ್ತಿದೆ.<br><br>ಉಳಿದಂತೆ ವರ್ಗವಾರು ಮನೆಗಳಿಗೆ ಜಿಪಿಎಸ್ ಆಧಾರಿತ ಮನೆಗಳ ಭೌತಿಕ ಪ್ರಗತಿಗೆ ಅನುಗುಣವಾಗಿ ನಿಗಮದಿಂದ DBT ಆಧಾರ್ ಆಧಾರಿತವಾಗಿ ಪರಿಹಾರಧನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ. |
| ಇ) | ಈ ರೀತಿಯ ನಿವೇಶನಗಳನ್ನು ಗುರುತಿಸಿ, ಇದುವರೆಗೂ ಪರಿಹಾರ ತೆಗೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ 2019 ರಿಂದ 2023ರವರೆಗೆ ನೆರೆಸಂತ್ರಸ್ಥರ ಪುನರ್ವಸತಿ ಯೋಜನೆಯ ಸಂಪೂರ್ಣ-ಎ ಮತ್ತು ಭಾಗಶಃ (ಪುನರ್ ನಿರ್ಮಾಣ) ಬಿ2 ವರ್ಗದಡಿ ಒಟ್ಟು 93368 ಮನೆಗಳನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿದ್ದು, ಆ ಪೈಕಿ ಒಟ್ಟು 52669 ಫಲಾನುಭವಿಗಳು ಖಾಲಿ ನಿವೇಶನಕ್ಕೆ ನಿಗಮ ಹಾಗೂ ಜಿಲ್ಲಾಡಳಿತದಿಂದ ಪರಿಹಾರಧನ ಪಡೆದಿರುತ್ತಾರೆ. |
| ಈ) | ಈ ರೀತಿ ಪ್ರಕೃತಿ ವಿಕೋಪದಿಂದ ದಾಖಲೆ ಸಮೇತ ಮನೆಗಳು ನಾಶವಾದಲ್ಲಿ, ನಿವೇಶನದ ಮಾಲೀಕರಿಗೆ ಸರ್ಕಾರದ ಮಟ್ಟದಲ್ಲಿ ಯಾವ ರೀತಿ ನ್ಯಾಯ ಒದಗಿಸಿಕೊಡಲಾಗುವುದು; | ಸರ್ಕಾರದ ಆದೇಶ ಸಂಖ್ಯೆ: ವಇ 78 ಹೆಚ್‌ಎಎಂ 2019 (ಭಾಗ-1), ದಿನಾಂಕ: 05.09.2019ರನ್ವಯ ಮಳೆ/ಪ್ರವಾಹದಿಂದ ಹಾನಿಗೊಳಗಾದ ಮನೆಯ ಮಾಹಿತಿಯನ್ನು ನಿಗಮದ ತಂತ್ರಾಂಶದಲ್ಲಿ ನಮೂದು ಮಾಡಲು ಆಧಾರ್ ಮತ್ತು ಪಡಿತರ ಚೀಟಿ ಮಾಹಿತಿಯನ್ನು ಕಡ್ಡಾಯಗೊಳಿಸಲಾಗಿದೆ. ಒಂದು ವೇಳೆ ಸದರಿ ದಾಖಲೆಗಳ ಸಹಿತ ಮನೆಗಳು ನಾಶಗೊಂಡಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ದಾಖಲೆಗಳನ್ನು ಮರು ಪಡೆದು ನಿಯಮಾನುಸಾರ ಪರಿಹಾರಧನ ಪಡೆಯಬಹುದಾಗಿದೆ. |
| ಉ) | ಇದುವರೆಗೂ, ಸದರಿ ನಿವೇಶನಗಳಲ್ಲಿ ಮನೆ ಕಟ್ಟಿಕೊಟ್ಟಿರುವ ಉದಾಹರಣೆಗಳೆಷ್ಟು ಹಾಗೂ ಇನ್ನೂ ಬಾಕಿ ಇರುವ ನಿವೇಶನಗಳೆಷ್ಟು?(ತಾಲ್ಲೂಕು ವಾರು ವಿವರ ನೀಡುವುದು) | ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಂಖ್ಯೆ: ವಇ 219 ಹೆಚ್‌ಎಎಂ 2024

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು